**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 189/2019

ಪಿಡಬ್ಲು : 7 ಸಿಡಬ್ಲು : 4

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಅಯೂಬ್ ಖಾನ ಬಾದಷಾ ಮುಲ್ಲಾ |
| ತಂದೆಯ ಹೆಸರು | : ಶ್ರೀ. ಬಾದಷಾ ಮುಲ್ಲಾ |
| ವಯಸ್ಸು | : 50 ವರ್ಷ |
| ಉದ್ಯೋಗ | : ಹೋಟೆಲ ವ್ಯಾಪಾರ |
| ವಾಸ್ತವ್ಯ | : ಪಾಂಗೇರಿ, ತಾಲೂಕುಃ ಚಿಕ್ಕೋಡಿ |
| ದಿನಾಂಕ | : 09-10-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಸಾಕ್ಷಿಗೆ ಹಿಂದಿ ಭಾಷೆ ಹೊರತುಪಡಿಸಿ ನ್ಯಾಯಾಲಯದ ಭಾಷೆಯಾದ ಕನ್ನಡ, ಆಂಗ್ಲ ಭಾಷೆ ತಿಳಿಯದೇ ಇರುವುದರಿಂದ ಮರಾಠಿ ಭಾಷೆಯನ್ನು ಚೆನ್ನಾಗಿ ಮಾತನಾಡಲು ಮತ್ತು ಬರೆಯಲು ಬಲ್ಲವರಾದಂತಹ ಶ್ರೀ.ಐ.ಜಿ.ಎನ್ ವಕೀಲರು ಬೆಳಗಾವಿ ವಕೀಲರ ಸಂಘ ಇವರನ್ನು ಭಾಷಾಂತರಕಾರರಾಗಿ ನೇಮಕ ಮಾಡಲಾಯಿತು. ಸದರಿ ವಕೀಲರಿಗೂ ಸಹ ಪ್ರಮಾಣ ವಚನ ಬೋಧಿಸಲಾಯಿತು.**

(3 ನೇಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಪರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. 3 ನೇ ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಪರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 5 ಪ್ರಾಸಾಃ 6 ರೋಹಿತ ಶೀತೋಳೆ ಎನ್ನುವವರು ನನಗೆ ಗೊತ್ತಿರುತ್ತಾರೆ. ದಿನಾಂಕಃ 02-04-2019 ರಂದು ನಿಪ್ಪಾಣಿ ಪೋಲಿಸರು ನನಗೆ ಸಹಿ ಮಾಡುವ ಸಲುವಾಗಿ ಪೋಲಿಸ ಠಾಣೆಗೆ ಕರೆಸಿದ್ದರು. ಠಾಣೆಯಲ್ಲಿ ಪೋಲಿಸರು ನನಗೆ ಯಾವುದೇ ವ್ಯಕ್ತಿಗಳನ್ನು ತೋರಿಸಿರುವುದಿಲ್ಲ. ಪೋಲಿಸರು ನನಗೆ ಬೇರೆ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ. ಆದರೆ ಪಾಂಗೇರಿಯಲ್ಲಿ ಕೊಲೆಯಾಗಿದ್ದ ಮನೆಗೆ ನನ್ನನ್ನು ಕರೆಸಿ ಅಲ್ಲಿ ನನ್ನ ಸಹಿ ಮಾಡಿಸಿಕೊಂಡರು. ಪೋಲಿಸರು ಕೊಲೆಯಾಗಿದ್ದ ಮನೆಯಲ್ಲಿ ಪೋಟೋ ತೆಗೆಯುವ ಸಮಯದಲ್ಲಿ ಮೂರು ಜನ ಆರೋಪಿತರು ಇದ್ದರು, ಆಗ ನಾನು ಅವರುಗಳನ್ನು ನೋಡಿದ್ದೇನೆ.

2. ಮೂರು ಜನ ಆರೋಪಿತರು ನನ್ನ ಸಮಕ್ಷಮ ಏನೂ ಹೇಳಿರುವುದಿಲ್ಲ. ಆರೋಪಿತರು ನನ್ನ ಸಮಕ್ಷಮ ಪೋಲಿಸರಿಗೆ ಯಾವುದೇ ವಸ್ತುವನ್ನು ತೋರಿಸಿರುವುದಿಲ್ಲ. ಪೋಟೋಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಪಾಂಗೇರಿ ಗ್ರಾಮದಲ್ಲಿ ಕೊಲೆಯಾಗಿದ್ದ ಮನೆಯಲ್ಲಿ ಪೋಲಿಸರು ತೆಗೆದ ಪೋಟೋಗಳು ಎಂದು ಸಾಕ್ಷಿಯು ನಿಪಿ-25 ರಿಂದ ನಿಪಿ-30 ವರೆಗಿನ ಪೋಟೋಗಳನ್ನು ತಮ್ಮ ಇರುವಿಕೆಯನ್ನು ಗುರುತಿಸಿದ್ದಾರೆ.

3. 1 ನೇ ಆರೋಪಿಯ ಕೈಯಲ್ಲಿ ಸುತ್ತಿಗೆ ಇರುವುದು ಕಂಡುಬಂದಿದ್ದು, ಅದನ್ನು ಯಾವ ಕಾರಣಕ್ಕೆ ಪೋಲಿಸರಿಗೆ ನೀಡಿದ್ದನು ಎನ್ನುವುದು ನನಗೆ ಗೊತ್ತಿಲ್ಲ. ಸುತ್ತಿಗೆಯನ್ನು ಪೋಲಿಸರು ತೆಗೆದುಕೊಂಡು ಹೋದರು. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ನಾನು ಪೋಲಿಸ ಠಾಣೆಯಲ್ಲಿ ಮತ್ತು ಕೊಲೆಯಾಗಿದ್ದ ಸ್ಥಳದಲ್ಲಿ ಸಹಿಗಳನ್ನು ಮಾಡಿದ್ದೇನೆ. ನಿಪಿ-31 ಪಂಚನಾಮೆ ಹಾಗೂ ನಿಪಿ-32 ನೋಟಿಸಿನಲ್ಲಿ ಸಾಕ್ಷಿ ತಮ್ಮ ಸಹಿಗಳನ್ನು ಗುರುತಿಸಿದ್ದಾರೆ.

ಸ್ಥಳದಲ್ಲಿ ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ.

4. ಕೊಲೆಯಾಗಿದ್ದ ಸ್ಥಳದಲ್ಲಿ ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಪಂಚನಾಮೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

ಪೋಲಿಸರು ನನಗೆ ಪೋನ ಮಾಡಿ ಪಂಚನಾಮೆ ಮಾಡಲು ಠಾಣೆಗೆ ಬರುವಂತೆ ಕರೆಸಿದ್ದರು. ಪೋಲಿಸರು ನನಗೆ ನಿಪಿ–32 ರಂತೆ ನೋಟಿಸ ನೀಡಿದ್ದರು ಎನ್ನುವುದು ಸರಿಯಲ್ಲ. ನಾನು ಠಾಣೆಗೆ ಹೋಗಿದ್ದಾಗ 3 ಜನ ಆರೋಪಿತರು ಠಾಣೆಯಲ್ಲಿ ಇದ್ದರು ಎನ್ನುವುದು ಸರಿಯಲ್ಲ. ಮೂರು ಜನ ಆರೋಪಿತರು ಪೋಲಿಸರಿಗೆ ತಾವು ಕೊಲೆ ಮಾಡಿದ ಜಾಗವನ್ನು ತೋರಿಸುತ್ತೇವೆ ಎಂದು ನನ್ನ ಸಮಕ್ಷಮ ಹೇಳಿದರು ಎನ್ನುವುದು ಸರಿಯಲ್ಲ.

2. ನಂತರ ಆರೋಪಿತರ ಹೇಳಿಕೆಯ ಮೇರೆಗೆ ಪೋಲಿಸರು ನನ್ನನ್ನು, ಆರೋಪಿತರನ್ನು ಪಾಂಗೇರಿಯಲ್ಲಿರುವ ಕೊಲೆಯಾಗಿದ್ದ ಮನೆಗೆ ಕರೆದುಕೊಂಡು ಹೋಗಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನಾನು ಪಾಂಗೇರಿಯಲ್ಲಿ ಕೊಲೆಯಾಗಿದ್ದ ಮನೆಯ ಬಳಿ ಇದ್ದೇನು ಎಂದು ಹೇಳಿದ್ದಾರೆ.

3. ಮೂರು ಜನ ಆರೋಪಿತರು ನನ್ನ ಸಮಕ್ಷಮ ಪೋಲಿಸರಿಗೆ ಕೊಲೆ ಮಾಡಿದ ಸ್ಥಳ ಎಂದು ತೋರಿಸಿದರು ಎನ್ನುವುದು ಸರಿ. ಸ್ಥಳದಲ್ಲಿ ಚೆಲ್ಲದ್ದ ರಕ್ತವನ್ನು ಪೋಲಿಸರು ನನ್ನ

ಸಮಕ್ಷಮ ಪಡೆದುಕೊಂಡರು ಎನ್ನುವುದು ಸರಿಯಲ್ಲ. ಅದೇ ಸಮಯದಲ್ಲಿ 1 ನೇ ಆರೋಪಿ ಸತೀಶ ಅವರು ಪೋಲಿಸರಿಗೆ ಒಂದು ಸುತ್ತಿಗೆಯನ್ನು ನೀಡಿ ಅದರಿಂದ ಕೊಲೆ ಮಾಡಲಾಗಿದೆ ಎಂದು ಹೇಳಿದರು ಎನ್ನುವುದು ನನಗೆ ಗೊತ್ತಿಲ್ಲ. 1 ನೇ ಆರೋಪಿ ಪೋಲಿಸರಿಗೆ ನ್ಯಾಯಾಲಯದ ಮುಂದೆ ಹಾಜರುಮಾಡಿರುವ ಸುತ್ತಿಗೆಯನ್ನು ನನ್ನ ಸಮಕ್ಷಮ ನೀಡಿದನು ಎಂದು ಸೂಚಿಸುವುದು ಸರಿ. ಸುತ್ತಿಗೆಯನ್ನು ಇರಿಸಲಾಗಿದ್ದ ಬಿಳಿಯ ಬಟ್ಟೆಯ ಭಾಂಗಿಯ ಮೇಲೆ ಅಂಟಿಸಲಾಗಿರುವ ಚೀಟಿಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು, ಸುತ್ತಿಗೆಯನ್ನೂ ಸಹ ಗುರುತಿಸಿದ್ದರಿಂದ ಸುತ್ತಿಗೆಯನ್ನು ಮು.ಮಾ.9 ಎಂದು ಗುರುತಿಸಲಾಯಿತು. ಮಹಜರ ಕ್ರಮವನ್ನು ಜರುಗಿಸಿ ಟೈಪ ಮಾಡಿದ ನಂತರ ನಾನು ಸಹಿ ಮಾಡಿದ್ದೇನೆ ಎನ್ನುವುದಕ್ಕೆ ಸಾಕ್ಷಿ ನಾನು ಸಹಿ ಮಾತ್ರ ಮಾಡಿದ್ದೇನೆ ಎಂದು ಹೇಳಿದ್ದಾರೆ.

4. ನಿಪಿ–31 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ನಾನು ಸಹಿ ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಶ್ರೀ.ಬಿ .ಜೆ .ಜೆ . ವಕೀಲರಿಂದ 3 ನೇ ಆರೋಪಿತನ ಪರವಾಗಿ**

ಆರೋಪಿತರು ಕೊಲೆ ಮಾಡಿದ ಸ್ಥಳವನ್ನು ತೋರಿಸುತ್ತೇವೆ ಎಂದು ಪೋಲಿಸರಿಗೆ ಯಾವ ಭಾಷೆಯಲ್ಲಿ ಹೇಳಿದರು ಎನ್ನುವ ಪ್ರಶ್ನೆಗೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ನಿಪಿ–31 ಪಂಚನಾಮೆಯಲ್ಲಿ ಚೆಕ್ ಬಂದಿ ಬರೆಯಲಾಗಿದೆ ಅಥವಾ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಮು.ಮಾ.9 ರ ವಿವರಣೆಯನ್ನು ನಿಪಿ–31 ರಲ್ಲಿ ಬರೆದಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ–25 ರಿಂದ ನಿಪಿ–30 ರ ಪೋಟೋಗಳನ್ನು ಯಾವ ಕಾರಣಕ್ಕೆ ತೆಗೆಯಲಾಗಿದೆ ಎಂದು ನಿಮಗೆ ಗೊತ್ತಿದೀಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾವು ಸಾಕ್ಷಿದಾರರಾಗಿ ನಿಂತಿದ್ದ ಬಗ್ಗೆ ತೆಗೆಯಲಾಗಿದೆ ಎಂದು ಹೇಳಿದ್ದಾರೆ.

2. ನಿಪಿ–28 ರಲ್ಲಿ ಕಾಣುವ ಸುತ್ತಿಗೆಯೇ ಮು.ಮಾ.9 ಎಂದು ಗುರುತಿಸಲು ಅದರ ಮೇಲೆ ಯಾವುದಾದರೂ ವಿಶೇಷ ಗುರುತು ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

**ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರ ಶ್ರೀ.ಬಿ.ಎಸ್.ಆರ್ ಮತ್ತು ಶ್ರೀ.ಎಲ್.ಜಿ.ಎನ್ ವಕೀಲರಿಂದ**

3 ನೇ ಆರೋಪಿತನ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 1 ಮತ್ತು 2 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.